Kerala Gazette No. 14 dated 3rd April 2018.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಬಿ) ಇಲಾಖೆ

## ಅಧಿಸೂಚನೆ

*2017 ಏಪ್ರಿಲ್ 4,*

ನಂಬ್ರ 7713/ಲೆಗ್. ಬಿ1/2017/ಕಾನೂನು. *ತಿರುವನಂತಪುರಂ, 1192 ಮೀನ 21/*

*1939 ಚೈತ್ರ 14.*

2017 ಏಪ್ರಿಲ್ 4ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

**2017ರ 3ನೇ ನಂಬ್ರ ಅಧ್ಯಾದೇಶ**

**2017ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧ್ಯಾದೇಶ**

ಭಾರತ ಗಣರಾಜ್ಯದ ಅರುವತ್ತೆಂಟನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

1951ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧ್ಯಾದೇಶ (2017ರ 2)ವನ್ನು 2017 ಫೆಬ್ರವರಿ 2ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದುದರಿಂದಲೂ;

2017 ಫೆಬ್ರವರಿ 23ನೇ ದಿನಾಂಕದಂದು ಆರಂಭವಾಗಿ 2017 ಮಾರ್ಚ್ 16ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶಕ್ಕೆ ಬದಲಾಗಿ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಒಂದು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (2)ರ ಉಪಖಂಡ (ಎ)ಯ ಪ್ರಕಾರ, ಪ್ರಸ್ತುತ ಅಧ್ಯಾದೇಶವು 2017 ಏಪ್ರಿಲ್ 6ನೇ ದಿನಾಂಕದಂದು ಜಾರಿಯಲ್ಲಿಲ್ಲದಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಚಾಲ್ತಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗ ಬಹುದಾದುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಮತ್ತು ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2017ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧ್ಯಾದೇಶ ಎಂದು ಕರೆಯಬಹುದು.

(2) ಇದು 2017 ಫೆಬ್ರವರಿ 3ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 1951ರ XIX ಅಧಿನಿಯಮ.—ಈ ಅಧ್ಯಾದೇಶವು ಜಾರಿಯಲ್ಲಿರುವ ಕಾಲದಲ್ಲಿ, 1951ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು ಅಧಿನಿಯಮ (1951ರ XIXನೇ ಮದ್ರಾಸ್ ಅಧಿನಿಯಮ) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ಕ್ಕೆ 3 ಮತ್ತು 4ನೇ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿದ ತಿದ್ದುಪಡಿಗಳಿಗನುಸಾರವಾಗಿ ಪ್ರಾಬಲ್ಯವಿರುವುದಾಗಿದೆ.

3. ವಿಭಾಗ 13ರ ತಿದ್ದುಪಡಿ.—ಪ್ರಧಾನ ಅಧಿನಿಯಮದ 13ನೇ ವಿಭಾಗದಲ್ಲಿ, (1)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) ಪ್ರತಿಯೊಂದು ಪ್ರಾದೇಶಿಕ ಕಮಿಟಿಯಲ್ಲಿ ಸರಕಾರವು ನೇಮಕಾತಿ ಮಾಡುವ ಏಳು ಸದಸ್ಯರು ಒಳಗೊಂಡಿರತಕ್ಕದ್ದು, ಅದೇನೆಂದರೆ:—

(ಎ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಸಮುದಾಯಗಳಿಂದ ಒಬ್ಬ ಸದಸ್ಯ;

(ಬಿ) ಒಬ್ಬ ಮಹಿಳಾ ಸದಸ್ಯೆ;

(ಸಿ) ಹಿಂದೂ ಮತದ ಒಬ್ಬ ತತ್ವಜ್ಞಾನಿ ಅಥವಾ ದೇವಸ್ಥಾನದ ಕಲೆಯ ಪ್ರದರ್ಶಕ ಅಥವಾ ಹಿಂದೂ ಸಾಹಿತ್ಯದಲ್ಲಿ ಪುಸ್ತಕವನ್ನು ಪ್ರಕಟಿಸಿದ ವ್ಯಕ್ತಿ; ಮತ್ತು

(ಡಿ) ನಾಲ್ಕು ಇತರ ಸದಸ್ಯರು.".

4. ಪ್ರಾದೇಶಿಕ ಸಮಿತಿಯ ಹಾಗೂ ಪಾರಂಪರ್ಯೇತರ ಟ್ರಸ್ಟಿಗಳ ಅಸ್ತಿತ್ವದಲ್ಲಿರುವ ಸದಸ್ಯರಿಗೆ ಸಂಬಂಧಿಸಿದ ವಿಶೇಷ ನಿಬಂಧನೆಗಳು.—ಪ್ರಧಾನ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧ್ಯಾದೇಶದ ಪ್ರಾರಂಭ ದಿನಾಂಕದಂದು ಹಾಗೂ ಅಂದಿನಿಂದ ಅಧಿಕಾರದಲ್ಲಿರುವ ಪ್ರಾದೇಶಿಕ ಸಮಿತಿಯ ಚೇರ್‌ಮೇನ್‌ರ ಮತ್ತು ಸದಸ್ಯರ ಹಾಗೂ ಪಾರಂಪರ್ಯೇತರ ಟ್ರಸ್ಟಿಗಳ, ಆಯಾಯ ವಿಷಯದಂತೆ ಪ್ರಾದೇಶಿಕ ಸಮಿತಿಯ ಅಂತಹ ಚೇರ್‌ಮೇನ್ ಮತ್ತು ಸದಸ್ಯರು ಹಾಗೂ ಪಾರಂಪರ್ಯೇತರ ಟ್ರಸ್ಟಿಗಳು ಎಂಬ ಅಧಿಕಾರವು ಮುಕ್ತಾಯವಾಗುವುದು.

5. ರದ್ಧತಿ ಮತ್ತು ರಕ್ಷಣೆ.— (1) 2017ರ ಮದ್ರಾಸ್ ಹಿಂದೂ ಮತೀಯ ಮತ್ತು ಧಾರ್ಮಿಕ ದತ್ತಿಗಳು (ತಿದ್ದುಪಡಿ) ಅಧ್ಯಾದೇಶ (2017ರ 2)ವು ಈ ಮೂಲಕ ರದ್ದುಗೊಂಡಿರುವುದು.

(2) ಅಂತಹ ರದ್ಧತಿಯು ಏನೇ ಇದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿಗೊಂಡ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧ್ಯಾದೇಶದ ಮೂಲಕ ತಿದ್ದುಪಡಿಗೊಂಡ ಪ್ರಧಾನ ಅಧಿನಿಯಮದ ಕೆಳಗೆ ಮಾಡಿದುದಾಗಿ ಅಥವಾ ಕೈಗೊಂಡುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.